**ಕರ್ನಾಟಕ ಸರ್ಕಾರ**

ಸಂಖ್ಯೆ: ಪಿಡಬ್ಲ್ಯೂಡಿ 39 ಸಿಆರ್‌ಎಂ 2005.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, 3ನೇ ಮಹಡಿ,
ಬೆಂಗಳೂರು, ದಿನಾಂಕ: 6–08–2005

**ಸುತ್ತೋಲೆ.**

ವಿಷಯ : ಗ್ರಾಮೀಣ ರಸ್ತೆಗಳು ಹಾಗೂ ಇತರೆ ಜಿಲ್ಲಾ ರಸ್ತೆಗಳನ್ನು (ODR) ಜಿಲ್ಲಾ ಮುಖ್ಯ ರಸ್ತೆಗಳಾಗಿ ಮೇಲ್ದರ್ಜೆಗೇರಿಸುವ ಕುರಿತು.

ರಾಜ್ಯ ಸರ್ಕಾರವು ನವೆಂಬರ್ 2003ರಲ್ಲಿ 10,000 ಕಿ.ಮೀ ಉದ್ದದ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿರುತ್ತದೆ. ತದನಂತರ ಹಲವಾರು ಗ್ರಾಮೀಣ ರಸ್ತೆಗಳನ್ನು ವಿವಿಧ ಆರ್ಥಿಕ ಯೋಜನೆಗಳು ಅಂದರೆ ನಬಾರ್ಡ್‌ನ ಗ್ರಾಮೀಣ ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಧಿ (RIDF), ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆ, 11ನೇ ಹಣಕಾಸು ಯೋಜನೆ, ಸಕ್ಕರೆ ಸುಂಕ ನಿಧಿ, ಕೃಷಿ ಉತ್ಪನ್ನ ಸಾಗಣೆ ನಿಧಿ ಇತ್ಯಾದಿಗಳ ಅಡಿಯಲ್ಲಿ ಅಭಿವೃದ್ಧಿಪಡಿಸಿ ಡಾಂಬರೀಕರಣ ಮಾಡಲಾಗಿದೆ. ಈ ರಸ್ತೆಗಳನ್ನು ಅಗಾಧವಾದ ಬಂಡವಾಳ ಹೂಡಿ ಅಭಿವೃದ್ಧಿಪಡಿಸಲಾಗಿದ್ದು, ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಲ್ಲಿ ಹಣದ ನಿಯತಕಾಲಿಕ ಲಭ್ಯತೆಯ ಕೊರತೆಯಿಂದಾಗಿ, ಈ ರಸ್ತೆಗಳನ್ನು ನಿರ್ವಹಣೆ ಸೂಕ್ತ ರೀತಿಯಲ್ಲಿ ಆಗುತ್ತಿರುವುದಿಲ್ಲ. ಇದರಿಂದಾಗಿ, ಭಾರಿ ಬಂಡವಾಳ ಹೂಡಿ ಸೃಜಿಸಲಾದ ಆಸ್ತಿಯನ್ನು ಸಕಾಲದಲ್ಲಿ ನಿರ್ವಹಣೆ ಮಾಡಿ ಸಂರಕ್ಷಿಸುವಂತೆ ನಾನಾವಲಯಗಳಿಂದ ಬೇಡಿಕೆ ಬರುತ್ತಿದೆ.

ಇದರಂತೆಯೇ, ಹಾಲಿ ಇರುವ "ಇತರೆ ಜಿಲ್ಲಾ ರಸ್ತೆಗಳು "(ODRs) ಕಡಿಮೆ ಪ್ರಮಾಣದ್ದಾಗಿದ್ದು, ಈ ರಸ್ತೆಗಳ ಹಲವು ಬಹುಪಾಲು "ಜಿಲ್ಲಾ ಮುಖ್ಯ ರಸ್ತೆ" ದರ್ಜೆ ಮಟ್ಟಕ್ಕೆ ಇರುತ್ತದೆ. ಈ ರಸ್ತೆಗಳನ್ನೂ ಸಹ ಹಣದ ಕೊರತೆಯಿಂದಾಗಿ ಜಿಲ್ಲಾ ಪಂಚಾಯತ್ ವತಿಯಿಂದ ಸೂಕ್ತವಾಗಿ ನಿರ್ವಹಣೆ ಮಾಡಲಾಗುತ್ತಿಲ್ಲ. ಇದಲ್ಲದೆ ಸಣ್ಣ ಬಂದರುಗಳು ಮತ್ತು ಮೀನುಗಾರಿಕೆ ಜೆಟ್ಟಿಗಳಿಗೆ, ರಾಜ್ಯದ ಗಡಿ ಪ್ರದೇಶಗಳಿಗೆ ಹಾಗೂ ವಿದ್ಯಾ ಸಂಸ್ಥೆಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು, ಸೇತುವೆಗಳ ಕೂಡು ರಸ್ತೆಗಳು, ಹಾಗೂ ಯಾತ್ರಾ ಸ್ಥಳಗಳು, ವಾಣಿಜ್ಯ ಪ್ರದೇಶಗಳನ್ನು ಸಂಪರ್ಕಿಸುವ

ರಸ್ತೆಗಳು, ಹಿಂದುಳಿದ ತಾಲ್ಲೂಕುಗಳಲ್ಲಿನ ರಸ್ತೆಗಳು (ನಂಜುಂಡಪ್ಪ ಸಮಿತಿ ಗುರುತಿಸಿರುವಂತೆ) ಮತ್ತು ಈ ಹಿಂದೆ ಅಸ್ತಿತ್ವದಲ್ಲಿದ್ದ ತಾಲ್ಲೂಕು ಅಭಿವೃದ್ಧಿ ಮಂಡಳಿ ರಸ್ತೆಗಳು ಹಾಗೂ ಪ್ರಮುಖ ನಗರ ಮತ್ತು ಪಟ್ಟಣ ಪ್ರದೇಶಗಳ ಸುತ್ತಲೂ ಸಂಚಾರ ದಟ್ಟಣೆ ಕಡಿಮೆಗೊಳಿಸಲು ಅನುಕೂಲವಾಗುವಂತಹ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಅವಶ್ಯಕತೆ ಇರುತ್ತದೆ. ಆದಕಾರಣ, ಈ "ಇತರೆ ಜಿಲ್ಲಾ ರಸ್ತೆ" ಮತ್ತು 'ಗ್ರಾಮೀಣ ರಸ್ತೆ"ಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಿದಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ನಿಯತಕಾಲದಲ್ಲಿ ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಬಹುದಾಗಿದ್ದು, ನಂತರದ ಅವಧಿಯಲ್ಲಿ ವಾಹನ ಸಾಂದ್ರತೆ ಹೆಚ್ಚಿದಂತೆ, ಈ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಅನುಕೂಲವಾಗುವುದರಿಂದ ಇವುಗಳನ್ನು ಮೇಲ್ದರ್ಜೆಗೇರಿಸುವಂತೆ ಚುನಾಯಿತ ಪ್ರತಿನಿಧಿಗಳು ಒತ್ತಾಯಿಸುತ್ತಿರುವರು.

ಇಂತಹ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಸಾಧ್ಯಾಸಾಧ್ಯತೆ ಬಗ್ಗೆ ಪರಿಶೀಲಿಸುವ ಸಲುವಾಗಿ, ಸದರಿ ರಸ್ತೆಗಳ ಸಂಪರ್ಕ, ಡಾಂಬರು ಮೇಲ್ಮೈ ಉದ್ದ, ಸಂಪರ್ಕ ಹೊಂದುವ ಹಳ್ಳಿಗಳ ಸಂಖ್ಯೆ ಮತ್ತು ಜನ ಸಂಖ್ಯೆ, ಲಭ್ಯವಿರುವ ರಸ್ತೆ ಭೂ ಅಗಲ (Road Land Width/ ROW), ವಾಹನ ಸಾಂದ್ರತೆ, ಯಾವ ಯೋಜನೆಯಡಿ ಅಭಿವೃದ್ಧಿ ಪಡಿಸಲಾಗಿದೆ ಇತ್ಯಾದಿ ಮಾಹಿತಿಗಳನ್ನು ಅನುಬಂಧದಲ್ಲಿನ ನಿಗದಿತ ನಮೂನೆಯಲ್ಲಿ ಸಲ್ಲಿಸಬೇಕಿರುತ್ತದೆ.

ಮೇಲ್ದರ್ಜೆಗೇರಿಸಬೇಕಿರುವ ರಸ್ತೆಗಳ ಪ್ರಸ್ತಾವನೆಯನ್ನು ತಯಾರಿಸುವಾಗ, ಈ ಕೆಳಕಂಡ ಮಾನದಂಡಗಳನ್ನು ಪರಿಗಣಿಸಬೇಕಿರುತ್ತದೆ.

1. ರಸ್ತೆಯ ಗರಿಷ್ಠ ಉದ್ದವು ಮೇಲೆ ತಿಳಿಸಿರುವ ಯೋಜನೆಗಳಡಿ ಡಾಂಬರೀಕರಣಗೊಂಡಿರಬೇಕು.

2. ರಸ್ತೆಗಳನ್ನು ಗುರುತಿಸುವಾಗ ಸಾಧ್ಯವಾದ ಮಟ್ಟಿಗೆ ಆ ರಸ್ತೆಗಳಲ್ಲಿನ ಎಲ್ಲಾ ಸೇತುವೆ/ಅಡ್ಡ ಮೋರಿಗಳು ಪೂರ್ಣಗೊಂಡಿದ್ದು , ತದನಂತರದ ಇವುಗಳ ಅಭಿವೃದ್ಧಿ ಶೂನ್ಯ/ ಕನಿಷ್ಟವಾಗಿರಬೇಕು.

3. ರಸ್ತೆಗಳು ತಾಲ್ಲೂಕು ಕೇಂದ್ರಗಳಿಗೆ, ಅಭಿವೃದ್ಧಿ ಕೇಂದ್ರಗಳಿಗೆ, ಪ್ರಮುಖ ಮಾರುಕಟ್ಟೆಗಳಿಗೆ (ಕೃಷಿ ಮತ್ತು ಫಲ ಮಾರುಕಟ್ಟೆಗಳು) ಹಾಗೂ ಪ್ರಾದೇಶಿಕ ಯಾತ್ರಾ ಸ್ಥಳಗಳು ಇತ್ಯಾದಿಗಳಿಗೆ ಸಂಪರ್ಕ ಕಲ್ಪಿಸಬೇಕು.

4. ರಸ್ತೆಗಳು 1000ಕ್ಕೂ ಮೇಲ್ಪಟ್ಟು ಜನಸಂಖ್ಯೆಯುಳ್ಳ ಹಳ್ಳಿಗಳಿಗೆ ಸಂಪರ್ಕ ಒದಗಿಸಬೇಕು.

5. ಇವುಗಳು ರಾಷ್ಟ್ರೀಯ ಹೆದ್ದಾರಿ/ ರಾಜ್ಯ ಹೆದ್ದಾರಿ/ ಜಿಲ್ಲಾ ಮುಖ್ಯ ರಸ್ತೆಗಳಿಗೆ ಸಂಪರ್ಕ ಕಲ್ಪಿಸಬೇಕು.

6. ರಸ್ತೆಯ ROW ( Right of way) ಕನಿಷ್ಟ 12.0 ಮೀ. ಇದ್ದು, ರಸ್ತೆಯ ಅಗಲವು (Road way/formation width) ಕನಿಷ್ಟ 7.50 ಮೀ ಇರಬೇಕು.

7. ಎಲ್ಲಾ "ಇತರೆ ಜಿಲ್ಲಾ ರಸ್ತೆ" ಗಳನ್ನು (ODRs) ಮೇಲ್ದರ್ಜೆಗೇರಿಸಲು ಪರಿಗಣಿಸಿ ವಿವರ ಸಲ್ಲಿಸುವುದು.

8. ತಾಲ್ಲೂಕಿನ ಭೌಗೋಳಿಕ ಆಧಾರದ ಮೇಲೆ ಸೂಕ್ತ ಪ್ರಾತಿನಿಧ್ಯ ನೀಡಬೇಕು. ಕಳೆದ ಬಾರಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವಾಗ ಭೌಗೋಳಿಕವಾಗಿ ಪ್ರಾತಿನಿಧ್ಯ ದೊರೆಯದೆ ಇರುವ ತಾಲ್ಲೂಕುಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು.

9. ಸದರಿ ರಸ್ತೆಗಳನ್ನು ಗುರುತಿಸುವಾಗ ಜಿಲ್ಲಾ ಪಂಚಾಯತ್ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ಗುರುತಿಸಬೇಕು.

10. ಪ್ರಸ್ತಾವನೆಯನ್ನು ಪ್ರತಿ ವಿಧಾನಸಭಾ ಮತಕ್ಷೇತ್ರಕ್ಕೆ 50–60 ಕಿ.ಮೀ ಇರುವಂತೆ ಮಿತಿಗೊಳಿಸಿ ಆದ್ಯತೆ ಅನ್ವಯ ಪಟ್ಟಿ ತಯಾರಿಸಬೇಕು.

ಈ ಮಾಹಿತಿಗಳನ್ನು ಸದರಿ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ಕ್ರೋಢೀಕರಿಸಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ದಕ್ಷಿಣ / ಉತ್ತರ ವಲಯ ಇವರು ದಿನಾಂಕ 25–08–2004ರ ಮುನ್ನ ತಪ್ಪದೇ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ. ಪ್ರಸ್ತಾವನೆಯೊಂದಿಗೆ ಜಿಲ್ಲಾವಾರು ಹಾಗೂ ತಾಲ್ಲೂಕುವಾರು ರಸ್ತೆಗಳ ಸಂಖ್ಯೆ ಹಾಗೂ ಪ್ರಸ್ತಾವಿತ ಉದ್ದದ ಸಂಕ್ಷಿಪ್ತ ಪಟ್ಟಿಗಳನ್ನು ಸಲ್ಲಿಸುವುದು.

(ಟಿ. ಸುಕುಮಾರ್)
ಸರ್ಕಾರದ ಕಾರ್ಯದರ್ಶಿ
ಲೋಕೋಪಯೋಗಿ ಇಲಾಖೆ

ಇವರಿಗೆ:

1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು.
2. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ) ಧಾರವಾಡ.
3. ಅಧೀಕ್ಷಕ ಇಂಜಿನಿಯರ್, ------------ ವೃತ್ತ ------------

4. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ವಿಭಾಗ ------------------

ಪ್ರತಿಯನ್ನು: -

1. ಮಾನ್ಯ ಲೋಇ ಮತ್ತು ಇಂಧನ ಸಚಿವರ ಆಪ್ತ ಕಾರ್ಯದರ್ಶಿ ಇವರ ಮಾಹಿತಿಗಾಗಿ
2. ಮುಖ್ಯ ಮಾಹಿತಿ ಅಧಿಕಾರಿ, ಮಾಹಿತಿ ತಂತ್ರಜ್ಞಾನ ಕೋಶ, ಲೋಇ, ರವರ ಮಾಹಿತಿಗಾಗಿ
3. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ನಬಾರ್ಡ್).
4. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.

**ಗ್ರಾಮೀಣ ರಸ್ತೆ ಹಾಗೂ ಇತರೆ ಜಿಲ್ಲಾ ಮುಖ್ಯ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ**

**ಲೋಕೋಪಯೋಗಿ ಇಲಾಖೆ, ------------------------ ವಿಭಾಗ**

| ಕ್ರಮ ಸಂಖ್ಯೆ | ತಾಲ್ಲೂಕು | ವಿಧಾನಸಭಾ ಕ್ಷೇತ್ರದ ಹೆಸರು | ಮೇಲ್ದರ್ಜೆಗೇರಿಸುವ ರಸ್ತೆಯ ಹೆಸರು | ರಸ್ತೆಯ ವರ್ಗ | ರಸ್ತೆಯ ಚೈನೇಜು, ಉದ್ದ (ಕಿ.ಮೀ.) | | | ಮೇಲ್ಮೈವಾರು ರಸ್ತೆಯ ಉದ್ದ (ಕಿ.ಮೀ.) | | | | ರಸ್ತೆ ಮೇಲ್ಮೈ (carriage way) ಅಗಲ (ಮೀ.) | ರಸ್ತೆಯ ರಹದಾರಿ ಅಗಲ (right of way) ಮೀ. | ಸರಾಸರಿ ವಾಹನ ಸಂಚಾರ ದಿನಕ್ಕೆ | | ರಸ್ತೆಯು ಹಾದು ಹೋಗುವ ತಾಲ್ಲೂಕು, ಸಂಪರ್ಕಿಸುವ ಜಿ.ಮು.ರ./ ರಾಜ್ಯ ಹೆದ್ದಾರಿ/ ರಾಷ್ಟ್ರೀಯ ಹೆದ್ದಾರಿ ವಿವರ | ರಸ್ತೆಯು ಸಂಪರ್ಕಿಸುವ ಹಳ್ಳಿಗಳ ವಿವರ (2001ರ ಜನಗಣತಿ ಪ್ರಕಾರ) | | ಯಾವ ಯೋಜನೆಯಲ್ಲಿ ಅಭಿವೃದ್ಧಿ ಪಡಿಸಲಾಗಿದೆ | ಪ್ರಸ್ತಾವನೆ ಮಾನ್ಯ ಮಾಡಿದವರ ವಿವರ |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | ಪ್ರಾರಂಭ | ಅಂತ್ಯ | ಒಟ್ಟು | ಗ್ರಾವೆಲ್ | ಜಲ್ಲಿ | ಡಾಂಬರು | ಒಟ್ಟು | | | ಸಂಖ್ಯೆ | ತೀವ್ರತೆ | | ಹೆಸರು | ಜನಸಂಖ್ಯೆ | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 |
| | | | | | | | | | | | | | | | | | | | | |